# ಬೆಂಗಳೂರು ಉತ್ತರ ವಿಶ್ವವಿದ್ಯಾಲಯ

ಶ್ರೀ ದೇವರಾಜ ಅರಸು ಬಡಾವಣೆ, ಟಮಕ, ಕೋಲಾರ – 563 103.

ಸಂಖ್ಯೆ: ಬೆಂ.ಉ.ವಿ.ವಿ/ವಿದ್ಯಾರ್ಥಿವೇತನ/601 /2018-19

ದಿನಾಂಕ: 26.10.2019

## ಸುತ್ತೋಲೆ

ದಿನಾಂಕ:23.10.2019ರಂದು ಉನ್ನತ ಶಿಕ್ಷಣ ಇಲಾಖೆಯಲ್ಲಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ ಹಾಗೂ e-Governanceರವರುಗಳ ಸೂಚನೆಯ ಮೇರೆಗೆ ವಿಡಿಯೋ ಕಾನ್ಫರೆನ್ಸನ್ನು ಏರ್ಪಡಿಸಿದ್ದು, ಸದರಿ ವಿಡಿಯೋ ಕಾನ್ಫರೆನ್ಸ್‌ನಲ್ಲಿ ಈ ಕೆಳಕಂಡ ವಿಷಯಗಳನ್ನು ತಪ್ಪದೆ ಅನುಷ್ಠಾನಗೊಳಿಸಲು ನಿರ್ದೇಶಿಸಿಲಾಗಿದೆ.

1. ಕರ್ನಾಟಕ ಸರ್ಕಾರವು ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನದ ಪೋರ್ಟಲ್‌ನ್ನು ಸೃಜಿಸಿದ್ದು, 2019-20ನೇ ಸಾಲಿನಲ್ಲಿ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನವನ್ನು ಪಡೆಯಲು ಅರ್ಹತೆ ಇರುವ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ/ಹಿಂದುಳಿದ ವರ್ಗ/ಅಲ್ಪಸಂಖ್ಯಾತರ ವರ್ಗಕ್ಕೆ ಸೇರಿದ ವಿದ್ಯಾರ್ಥಿಗಳು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಅವಕಾಶವನ್ನು ಮಾಡಿಕೊಡಲಾಗಿದೆ.
2. ಸದರಿ ಪೋರ್ಟಲ್‌ನ್ನು ದಿನಾಂಕ 01.11.2019ರಂದು ಲೋಕಾರ್ಪಣೆ ಮಾಡಿ ದಿನಾಂಕ:30.11.2019 ರವರೆಗೆ ಸೇವೆ ಲಭ್ಯವಾಗಿರುವಂತೆ ವ್ಯವಸ್ಥೆ ಮಾಡಿರುತ್ತಾರೆ.
3. ವಿದ್ಯಾರ್ಥಿಗಳು ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನದ ಅಡಿಯಲ್ಲಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿದಾಗ, ಸಲ್ಲಿಸಿರುವ ದಾಖಲಾತಿಗಳು ಸರಿಯಾಗಿದೆ ಎಂದು ದೃಡೀಕರಿಸುವ ಜವಾಬ್ದಾರಿಯನ್ನು ಆಯಾ ವಿಶ್ವವಿದ್ಯಾಲಯದ ಅಧಿಕಾರಿಗಳು ಹಾಗೂ ಕಾಲೇಜುಗಳ ಪ್ರಾಂಶುಪಾಲರಿಗೆ ವಹಿಸಿದ್ದು, ಈ ಸಂಬಂಧ ನೇಮಕಗೊಂಡಿರುವ E-Atteststion Officerಗಳು ಸಹಿ ಮಾಡುವ ಮೂಲಕ ದೃಡೀಕರಿಸಬೇಕಾಗಿದೆ.
4. ಈ ಯೋಜನೆಗಾಗಿ ಇದುವರೆವಿಗೆ ಕಾಲೇಜುಗಳಲ್ಲಿ ಒಬ್ಬ ಅಧಿಕಾರಿಯನ್ನು E-Atteststion ಅಧಿಕಾರಿಯನ್ನಾಗಿ ನೇಮ್ಮಿಸಿರುವುದು ತಮ್ಮೆಲ್ಲರಿಗೂ ಗೊತ್ತಿರುವ ವಿಷಯವಾಗಿದೆ. ಒಬ್ಬರೇ E-Atteststion Officer ಇಂದ ದೃಡೀಕರಿಸುವುದು ಕಷ್ಟಕರವಾಗಿರುವುದರಿಂದ, ಈಗಿರುವ E-Atteststion ಅಧಿಕಾರಿಯ ಜೊತೆಗೆ ಇತರೆ E-Atteststion ಅಧಿಕಾಯನ್ನು ನೇಮಿಸಿ, ಅವರ ಸಂಖ್ಯೆ 2ರಿಂದ ಸಂಖ್ಯೆ 5ನ್ನು ಮೀರದಂತೆ, E-Atteststion Officer ನೇಮಿಸಿಕೊಳ್ಳಲು ಅವಕಾಶ ಮಾಡಿಕೊಟ್ಟಿರುತ್ತಾರೆ. ನೇಮಿಸಿಕೊಂಡ ನಂತರ ಅಧಿಕಾರಿಗಳ ಹೆಸರು, ಪದನಾಮ, ಆಧಾರ್ ಸಂಖ್ಯೆ ಹಾಗೂ ಮೊಬೈಲ್ ಸಂಖ್ಯೆಯನ್ನು ಪಡೆದು ನೇಮಿಸಿಕೊಳ್ಳಬಹುದಾಗಿದೆ. ನೇಮಿಸಿಕೊಂಡ ಬಗ್ಗೆ ಮಾಹಿತಿಯನ್ನು ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಕುಲಸಚಿವರ ಹೆಸರಿಗೆ ತುರ್ತಾಗಿ ಕಳುಹಿಸಲು ಸೂಚಿಸಿದೆ.
5. ಅಧಿಕಾರಿಗಳು/ ವಿದ್ಯಾರ್ಥಿಗಳಿಂದ ಅವರುಗಳ ವಯಕ್ತಿಕ ಆಧಾರ್ ಮಾಹಿತಿಯನ್ನು ಪಡೆಯುವಾಗ ಕಡ್ಡಾಯವಾಗಿ ಆಧಾರ್ ಹೊಂದಿರುವವರ ಸಹಮತಿಯನ್ನು (consent) ಲಿಖಿತ ರೂಪದಲ್ಲಿ ಪಡೆದು ಅವುಗಳನ್ನು ಕಾಲೇಜು/ವಿಶ್ವವಿದ್ಯಾಲಯಗಳು ಬಹಳ ಜವಾಬ್ದಾರಿಯಿಂದ ನಿರ್ವಹಿಸಬೇಕು.
6. ವಿದ್ಯಾರ್ಥಿಗಳ ವಾರ್ಷಿಕ ವರಮಾನವ (Annual income)ನ್ನು ಪರಿಶೀಲಿಸುವಾಗ ಅವರ ಪೋಷಕರ ಸಂಬಳದ ಇತ್ತೀಚಿನ ಚೀಟಿ (Recent Salary Slip)ಯನ್ನು ಪರಿಶಿಲಿಸಿ ದೃಡೀಕರಿಸಬೇಕಾಗಿದೆ
7. ವಿದ್ಯಾರ್ಥಿಯು ಪ್ರವೇಶಾತಿ ಸಮಯದಲ್ಲಿ ಕಾಲೇಜಿಗೆ ಪಾವತಿಸಿದ ಶುಲ್ಕದ ಬಗ್ಗೆ ವಿವರಗಳನ್ನು ನಮೂದಿಸತಕ್ಕದ್ದು. ಉದಾಹರಣೆ: Admission fee, Tuition fee, Lab fee, Sports fee,

Scanned by CamScanner

Library fee ಇತ್ಯಾದಿಗಳನ್ನು ಪ್ರತ್ಯೇಕವಾಗಿ ತುಂಬಬೇಕು. ಜೊತೆಗೆ ಪ್ರತಿ ಕೋರ್ಸುಗಳಿಗೆ ಸಂಬಂಧಿಸಿದಂತೆ ಮೊದಲನೇ ವರ್ಷದ, ಎರಡನೇ ವರ್ಷದ ಮತ್ತು ಮೂರನೇ ವರ್ಷದ ಶುಲ್ಕಗಳ ವಿವರಗಳನ್ನು ದಾಖಲಿಸಿ ತುಂಬುವುದು.

8. ವಿದ್ಯಾರ್ಥಿಯ ಅಂಕ ಪಟ್ಟಿ (marks card)ಯಲ್ಲಿ ಉತ್ತೀರ್ಣರಾಗಿದ್ದಲ್ಲಿ, ಅನುತೀರ್ಣರಾಗಿದ್ದಲ್ಲಿ ಅಥವಾ ಕೆಲವು ವಿಷಯಗಳಲ್ಲಿ ಉತ್ತೀರ್ಣರಾಗಿದ್ದು, ಮುಂದಿನ ತರಗತಿಗಳಿಗೆ ಹಾಜರಾಗಲು ಅರ್ಹತೆ ಹೊಂದಿಲ್ಲದ ಅಸಲು ಅಂಕಪಟ್ಟಿಯನ್ನು ಪರಿಶೀಲಿಸಿ ದೃಡೀಕರಿಸತಕ್ಕದ್ದು.

9. ಉನ್ನತ ಶಿಕ್ಷಣ ಇಲಾಖೆರವರು State Scholarship Portal ಯೋಜನೆಯ ಬಗ್ಗೆ ಮಾಹಿತಿಗಾಗಿ ಹಾಗು ಪ್ರಚಾರಕ್ಕಾಗಿ ಒದಗಿಸುವಂತಹ ಪ್ರಚಾರದ materialಗಳನ್ನು ತಮ್ಮ ತಮ್ಮ ಕಾಲೇಜುಗಳಿಗೆ ಹೊದಗಿಸಲಾಗುವುದು. ಅದನ್ನು ವಿದ್ಯಾರ್ಥಿಗಳು ಹಾಗೂ ಪೋಷಕರ ಗಮನಕ್ಕೆ ತರುವಂತೆ ತಮ್ಮ ಕಾಲೇಜನ Notice board ಹಾಗೂ ಇತರೆ ಪ್ರಮುಖ ಸ್ಥಳಗಳಲ್ಲಿ ಪ್ರದರ್ಶಿಸುವುದು.

10. State Scholarship Portal ಯೋಜನೆಯ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಉನ್ನತ ಶಿಕ್ಷಣ ಇಲಾಖೆಯು ಸೃಜಿಸಿರುವ ವೆಬ್‌ಸೈಟ್ www.ssp.karnataka.gov.inಗೆ ಭೇಟಿ ಕೊಟ್ಟು ತಮಗೆ ಇರುವ ಸಂದೇಹವನ್ನು ಬಗೆಹರಿಸಿಕೊಳ್ಳಬಹುದು.

11. ವಿದ್ಯಾರ್ಥಿಗಳು ಆನ್ ಲೈನ್ ಮೂಲಕ ಅರ್ಜಿ ಸಲ್ಲಿಸುವಾಗ ಮೇಲೆ ವಿವರಿಸಿರುವ ವೆಬ್ ಸೈಟ್ ನಲ್ಲಿ ಅರ್ಜಿ ಸಲ್ಲಿಸಬಹುದು.

12. ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ/ಪ್ರವರ್ಗ –1 ವಿದ್ಯಾರ್ಥಿಗಳಿಗೆ ಈಗಾಗಲೇ ಸಮಾಜ ಕಲ್ಯಾಣ ಇಲಾಖೆ ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ ಹಾಗೂ ಹಿದುಳುದ ವರ್ದಗಳ ಕಲ್ಯಾಣ ಇಲಾಖೆ ರವರು ವಿದ್ಯಾರ್ಥಿಗಳು ಪ್ರವೇಶಾತಿ ಪಡೆಯುವ ಸಮಯದಲ್ಲಿ ವಿಶ್ವವಿದ್ಯಾಲಯ/ ಕಾಲೇಜುಗಳು ನಿಗದಿ ಪಡಿಸಿರುವ ಶುಲ್ಕವನ್ನು ಕಡ್ಡಾಯವಾಗಿ ವಸೂಲಿ ಮಾಡದೆ ಕನಿಷ್ಟ ಶುಲ್ಕವನ್ನು ಪಡೆಯುವಂತೆ ಸಂಬಂಧ ಪಟ್ಟ ಇಲಾಖೆಯು ಸುತ್ತೋಲೆ ನೀಡಿದ್ದು ಆ ಪ್ರಕಾರ ವಿದ್ಯಾರ್ಥಿಗಳಿಗೆ ಪ್ರವೇಶಾತಿ ನೀಡಿ ವಿದ್ಯಾರ್ಥಿಗಳಿಂದ ವಿಶ್ವವಿದ್ಯಾಲಯ / ಕಾಲೇಜುಗಳಿಗೆ ಬರಬೇಕಾದ ಪ್ರವೇಶ ಶುಲ್ಕ ಹಾಗೂ ಪರೀಕ್ಷಾ ಶುಲ್ಕಗಳನ್ನು ಆಯಾ ಇಲಾಖೆಗಳು ಪಾವತಿಸುವಂತೆ ಕೋರಿ ವಿದ್ಯಾರ್ಥಿಗಳ ಪಟ್ಟಿ ಮಾಡಿ ಅವರಿಂದ ಸಂಸ್ಥಗೆ ಬರಬೇಕಾದ ಶುಲ್ಕದ ಬಗ್ಗೆ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಾದಲ್ಲಿ ಸಮಾಜ ಕಲ್ಯಾಣ ಇಲಾಖೆಗೂ, ಪರಿಶಿಷ್ಟ ಪಂಗಡಕ್ಕೆ ಸೇರಿದವಿದ್ಯಾರ್ಥಿಗಳಾದಲ್ಲಿ ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಗೂ ಪ್ರವರ್ಗ–1 ಆದಲ್ಲಿ ಹಿಂದುಳಿದ ವರ್ಗದ ಕಲ್ಯಾಣ ಇಲಾಖೆಗೂ ಪತ್ರ ಬರೆದು ಬರಬೇಕಾದ ಶುಲ್ಕವನ್ನು ಪಡೆದುಕೊಳ್ಳಲು ಸೂಚಿಸಿರುತ್ತಾರೆ.ಇದರಂತೆ ಕಾಲೇಜು ಪ್ರಾಂಶುಪಾಲರು ಕ್ರಮವಹಿಸುವುದು.

13. ಹೆಚ್ಚಿನ ಮಾಹಿತಿಗಾಗಿ www.ssp.karnataka.gov.in

28/10/2019
ಕುಲಸಚಿವರು

ಕುಲಸಚಿವರು
ಬೆಂಗಳೂರು ಉತ್ತರ ವಿಶ್ವವಿದ್ಯಾಲಯ
ಟಮಕಾ, ಕೋಲಾರ–ಕರ್ನಾಟಕ–563 103.

ಗೆ,

ಎಲ್ಲಾ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರುಗಳಿಗೆ

Scanned by CamScanner